## ಓ.ಎಸ್ಃ **310-2022**

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 17.01.2023 ರಂದು ಪ್ರಮಾಣ ವಚನ ನೀಡಲಾಯಿತು.</u>**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳನ್ನು ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ/ಶ್ರೀಮತಿ ವಕೀಲರಿಂದ</u>**

ದಿನಾಂಕ 07.11.2014 ರ ಕ್ರಯದ ಒಪ್ಪಂದದ ಕರಾರು ಪತ್ರವನ್ನು ಹಾಜರುಪಡಿಸಿದ್ದು ನಿಪಿ 1 ಎಂದು, 1ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1 ಎ ಎಂದು, 2ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1 ಬಿ ಎಂದು, 3ನೇ ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1 ಸಿ ಎಂದು, ವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1 ಡಿ ಎಂದು, ಪತ್ರ ಬರಹಗಾರರಾದ ರವೀಂದ್ರ ಎಂ.ಎಂ ರವರ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 1 ಇ ಎಂದು, ಸಾಕ್ಷಿದಾರರಾದ ಕೃಷ್ಣೇಗೌಡರವರ ಸಹಿಯನ್ನು ನಿಪಿ 1 ಎಫ್ ಎಂದು, ಸಾಕ್ಷಿ ಕೆ.ಬಿ. ಬಾಲಚಂದ್ರ ರವರ ಸಹಿಯನ್ನು ನಿಪಿ 1 ಜಿ ಎಂದು, ಸಾಕ್ಷಿ ರವಿ ರವರ ಸಹಿಯನ್ನು ನಿಪಿ 1 ಹೆಚ್ ಎಂದು ಗುರುತಿಸಲಾಯಿತು.

ದಿ. 04.11.2017 ರ ಕ್ರಯದ ಒಪ್ಪಂದದ ಕರಾರು ಮುಂದುವರಿಕೆ ಪತ್ರವನ್ನು ಹಾಜರುಪಡಿಸಿದ್ದು ನಿಪಿ 2 ಎಂದು, 1 ರಿಂದ 3ನೇ ಪ್ರತಿವಾದಿಯರ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 2 ಎ, 2 ಬಿ, 2 ಸಿ ಎಂದು, ವಾದಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ 2 ಡಿ, ಪತ್ರಬರಹಗಾರರಾದ ಪಿ.ಎಸ್.ಜಯಪ್ರಕಾಶ್ ರವರ ಸಹಿಯನ್ನು ನಿಪಿ 2 ಇ

ಎಂದು, ಸಾಕ್ಷಿದಾರರಾದ ಕೀರ್ತಿ ರವರ ಸಹಿಯನ್ನು ನಿಪಿ 2 ಎಫ್ ಎಂದು, ಸಾಕ್ಷಿ ಸತೀಶ್ ರವರ ಸಹಿಯನ್ನು ನಿಪಿ 2 ಜಿ ಎಂದು ಗುರುತಿಸಲಾಯಿತು. ಮುಂದುವರೆದು ಪ್ರತಿವಾದಿಗಳಿಗೆ ವಕೀಲರ ಮೂಲಕ ನೀಡಿದ ನೋಟೀಸಿನ ಕಛೇರಿನ ಪ್ರತಿಯನ್ನು ನಿಪಿ 3 ಎಂದು, 3 ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ನಿಪಿ 4 ರಿಂದ 6 ಎಂದು, 3 ಅಂಚೆ ಸ್ವೀಕೃತಿಯನ್ನು ಹಾಜರುಪಡಿಸಿದ್ದು ನಿಪಿ 7 ರಿಂದ 9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ